

ಎಡದಿಂದ ಬಲಕ್ಕೆ:

1. ವಿದ್ಯಾದಾನದ ಕಾರ್ಯದಿಂದಲೇ ಆತ ಮೇಲೆ ಬಂದ 3
3. ಅಲ್ಲಿನ ಜನರೆಲ್ಲ ಬಡವರೇಕೆಂದರೆ ಅವರ ಭೂಮಿ ನಿಸ್ಸಾರ 3
4. ಅದ್ಭುತ ಚಮತ್ಕಾರಗಳನ್ನು ಮಾಡಿದಾತ ಬಹಳ ಜಾಣ 3
6. ಆವೇಶದಲ್ಲಿ ಕೈ ಹಾಕಿದಾಗ ಸಿಕ್ಕಿದ ವಸ್ತು ಪ್ರಾಣಹಾರಕ 4
7. ಪುಕ್ಕಟೆ ಸಿಗುವ ವಸ್ತುಗಳ ಬಗೆಗೆ ಎಲ್ಲರಿಗೂ ತಿಳಿಯುವಂತೆ ಮಾಡು 4
9. ಯುದ್ಧ ಪದ್ಧತಿಗಳನ್ನೆಲ್ಲ ಬಲ್ಲವನಾಗಿದ್ದಾನೆ ಆ ಸೇನಾಧಿಪತಿ 4
11. ಆರಿಸಿ ಬಂದವರ ಭೇಟಿಗೆ ಏಕಿಷ್ಟು ಆತುರ? 4
15. ಗೂಳಿಯ ಗುಟುರು ಕೇಳಿದೊಡನೆ ಓಡಿಹೋಯಿತು ಗಂಡು ಕುರಿ 3
16. ಕತ್ತಲಿನಲ್ಲೂ ಕಾಣುವಂತಿದೆ, ಎಳ್ಳಿನಾಕಾರದ ಹಣೆ ಬೊಟ್ಟು 3
17. ಮುರುಳಿಯ ನಾದಕ್ಕೆ ಮನಸೋತು ಹಿಂದು ಮುಂದಾದ ಹುಚ್ಚ! 3

ಮೇಲಿಂದ ಕೆಳಕ್ಕೆ:

1. ಪಾಂಡವರು ಧರಿಸುತ್ತಿದ್ದಂತಹದೇ ವಸ್ತ್ರ 3
2. ಚೋರರನ್ನೆಲ್ಲ ಭದ್ರವಾಗಿ ಬಂಧಿಸಿಡಲು ತಕ್ಕ ನಿರ್ಮಿತಿ ಇದು 3
3. ಎಲ್ಲರನ್ನೂ ಕಳಿಸಿ ಬಂದಾದ ತರುವಾಯ ....? 3
5. ಕಾರಂಜಿಯಲ್ಲೇ ಬಟ್ಟೆ ಒಗೆಯುತ್ತಿದ್ದಾನೆ ನೋಡಿ, ಅಗಸ 3
6. ಧಾರ್ಮಿಕ ವಿಧಿವಿಧಾನ ಕುರಿತು ಕಲಹದಂಥ ಚರ್ಚೆ 3
8. ಸುಸ್ತೆಲ್ಲ ಹೋದನಂತರ ಈಗ ಚೆನ್ನಾಗಿ ನಿಶ್ಚಲ 3
10. ಇಲ್ಲಿದ್ದ ಟಪಾಲು ಕಚೇರಿ ಬೇರೆಡೆಗೆ ಸ್ಥಳಾಂತರವಾಗಿದೆ 3
12. ವೇಣುವಾದನ ಕಲೆಯಲ್ಲೂ ನಿಷ್ಣಾತ ಈ ವ್ಯಾಪಾರಿ 3
13. ಧರೆಯಾಳದಿಂದಲೂ ಬಿಡದೆ ದೋಚಿದನಲ್ಲ, ಕೆಟ್ಟ ಮನುಷ್ಯ 3
14. ಆಮಂತ್ರಿಸುವ ಕೆಲಸ, ಇದೇ ಕೊನೆ 3

## 21-11-2019 ಉತ್ತರಗಳು

ಎಡದಿಂದ ಬಲಕ್ಕೆ:

1. ತಾರಾಪುಂಜ 3. ಸಂತಾಪ 4. ನಟನೆ 6. ಕಮನೀಯ 7.ತರಗತಿ 9. ತರತಮ 12. ಕೆಡೆನುಡಿ 14. ತತ್ಪಲ 15. ತಲುಪು 16. ಯಜಮಾನ

ಮೇಲಿಂದ ಕೆಳಕ್ಕೆ :

1. ತಾಪತ್ರಯ 2. ಜನಮತ 3. ಸಂಭ್ರಮ 5. ನೆಣಗ (= ಗಣನೆ ತಲೆಕೆಳಗು) 6. ಕಲುಷಿತ 8. ತಿಳಿಗೇಡಿ 10. ರಜತ 11. ಮಹಾಲಯ 12. ಕೆಳೆತನ 13. ನುಣುಪು

ಪ್ರಶ್ನಾ ಂಕಣ

# ಅಳಿಲು ಮಂಗ: ಅಳಿಯುತ್ತಿದೆ ಏಕೆ?

ಅಳಿಲು ಮಂಗ : ಅದೊಂದು ಪುಟ್ಟ ಗಾತ್ರದ ಮಂಗ (ಚಿತ್ರ ನೋಡಿ). ವಾಸ್ತವವಾಗಿ ಅತ್ಯಂತ ಪುಟ್ಟ 'ಮಾರ್ಮಾಸೆಟ್' ಮಂಗಗಳ ನಂತರ ಅಳಿಲು ಮಂಗಗಳದೇ ಅತ್ಯಂತ ಚಿಕ್ಕ ಗಾತ್ರ. 9ರಿಂದ 18 ಅಂಗುಲ ಉದ್ದದ ತೆಳ್ಳನೆ ಶರೀರ, ಸರಿ ಸುಮಾರು ಶರೀರದಷ್ಟೇ ಉದ್ದದ ಬಾಲ, ಬೆಳ್ಳನೆ ಮುಖ , ಕಪ್ಪಾದ ಬಾಯಿ ಮೂಗು ಕಣ್ಣುಗಳು ಮತ್ತು ತಲೆಯ ಮೇಲ್ಭಾಗ, ದೇಹದ ಉಳಿದೆಲ್ಲ ಭಾಗದ್ದೂ ತಿಳಿ ಹಳದಿ ಮತ್ತು ಬೂದು ಬಣ್ಣ (ಚಿತ್ರ 2ರಲ್ಲಿ ಗಮನಿಸಿ). 250 ಗ್ರಾಂನಿಂದ 750 ಗ್ರಾಂ ಮೀರದ ದೇಹ ತೂಕದ ಅಳಿಲು ಮಂಗಗಳದು ವೃಕ್ಷಗಳ ಕೊಂಬೆ ರೆಂಬೆಗಳ ಮೇಲೆ ಅಳಿಲುಗಳಂತೆ ಸರಸರ ಓಡಾಟ, ತುಂಬ ಚುರುಕಾದ ನಡವಳಿಕೆ.

ಮಂಗಗಳ ವರ್ಗದ, ಸೆಬಿಡೇ ಕುಟುಂಬದ, ಸೈಮಿರೀ ವಂಶಕ್ಕೆ ಸೇರಿರುವ ಅಳಿಲು ಮಂಗಗಳಲ್ಲಿ ಐದು ಪ್ರಭೇದಗಳಿವೆ; ಎಂಟು ಉಪ ಪ್ರಭೇದಗಳಿವೆ. ಅಳಿಲು ಮಂಗಗಳದು 'ಹೊಸ ಜಗತ್ತಿಗೆ' (ಎಂದರೆ ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳಿಗೆ) ಸೀಮಿತವಾದ ವಾಸ. ಅಲ್ಲೂ ಮಧ್ಯ ಮತ್ತು ದಕ್ಷಿಣ ಅಮೆರಿಕದ ವೃಷ್ಟಿ ವನಗಳಲ್ಲಷ್ಟೇ ಅವುಗಳ ನೈಸರ್ಗಿಕ ನೆಲೆ.

ಈ ಪುಟ್ಟ ಮಂಗಗಳದು ಗುಂಪು ಜೀವನ ಕ್ರಮ. ಪ್ರತಿ ಗುಂಪಿನಲ್ಲೂ 25ರಿಂದ 500 ಸದಸ್ಯರು. ಯಾವುದೇ ಗುಂಪು ಇತರ ಗುಂಪುಗಳೊಡನೆ ಕಚ್ಚಾಟ ಸೆಣಸಾಟ ಮಾಡುವುದೇ ಇಲ್ಲ. ನಿಬಿಡ ವೃಷ್ಟಿವನಗಳ ವೃಕ್ಷಗಳಲ್ಲಿ ಮಧ್ಯಮ ಸ್ತರದಲ್ಲಿ ಇವುಗಳ ಜೀವನ. ಅಳಿಲು ಮಂಗಗಳದು ಸಂಪೂರ್ಣ ವೃಕ್ಷ ವಾಸ; ಅವು ನೆಲಕ್ಕಿಳಿಯುವುದು ಅತ್ಯಂತ ಅಪರೂಪ. ಹಗಲಲ್ಲಿ ಮಾತ್ರವೇ ಕ್ರಿಯಾಶೀಲವಾಗಿರುವ ಈ ಮಂಗಗಳದು ಮಿಶ್ರಾಹಾರ




ಕ್ರಮ: ಹೂವು, ಹಣ್ಣು, ಕಾಯಿ, ಬೀಜ, ಕೀಟಗಳು, ಹಲ್ಲಿಗಳು, ಹಕ್ಕಿ ಮೊಟ್ಟೆಗಳು... ಇತ್ಯಾದಿ. ದೇಹ ಗಾತ್ರಕ್ಕೆ ಹೋಲಿಸಿದರೆ ಬಹು ದೊಡ್ಡ ಮೆದುಳನ್ನು ಹೊಂದಿರುವ ಈ ಮಂಗಗಳು ಸಹಜವಾಗಿಯೇ ತುಂಬ ಚತುರ ಪ್ರಾಣಿಗಳಾಗಿವೆ ಕೂಡ. ಸರ್ಪಗಳು, ಬೇಟೆಗಾರ ಹದ್ದುಗಳು ಮತ್ತು ಕಾಡು ಬೆಕ್ಕುಗಳು ಈ ಮಂಗಗಳ ಪ್ರಮುಖ ಶತ್ರುಗಳು. ಅವಕ್ಕೆ ಬಲಿಯಾಗದೆ ಉಳಿದರೆ ಅಳಿಲು ಮಂಗಗಳು 25 ವರ್ಷ ಕಾಲ ಬದುಕಿರಬಲ್ಲವು!

ವಿಪರ್ಯಾಸ ಏನೆಂದರೆ, ನೈಸರ್ಗಿಕ ಶತ್ರುಗಳಿಗಿಂತ ಮನುಷ್ಯರಿಂದಲೇ ಅಳಿಲು ಮಂಗಗಳು ಹೆಚ್ಚು ಅಪಾಯಕ್ಕೆ ಸಿಲುಕಿವೆ. ಪ್ರಮುಖವಾಗಿ ಅರಣ್ಯ ನಾಶ ಮತ್ತು 'ವನ್ಯ ಮಾಂಸ ದಂಧೆ' ಈ ಮಂಗಗಳನ್ನು ಭಾರೀ ಸಂಕಷ್ಟಕ್ಕೆ ತಳ್ಳಿವೆ . ಮುದ್ದಿನ ಸಾಕುಪ್ರಾಣಿಯಾಗಿಯೂ ಜನಪ್ರಿಯವಾಗಿ, ವೈದ್ಯಕೀಯ ಸಂಶೋಧನೆಗಳಲ್ಲೂ 'ಪ್ರಯೋಗ ಪಶು'ವಾಗಿ, ... ಅಂಥ ಉದ್ದೇಶಗಳಿಗಾಗಿ ಅಳಿಲು ಮಂಗಗಳು ತೀವ್ರ ಕಳ್ಳಬೇಟೆಗೆ ಗುರಿಯಾಗಿವೆ. ಆದ್ದರಿಂದಲೇ ಅವು ನಿರಂತರ ಹತವಾಗುತ್ತ ಅಳಿವ ದಾರಿ ಹಿಡಿದಿವೆ.

■ ಎನ್. ವಾಸುದೇವ್